# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಜಲಾನಯನ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆ ಕೆಲಸ ಮಾಡಿ ಹಣ ದುರುಪಯೋಗ ಪಡಿಸಿಕೊಂಡ ಬಗ್ಗೆ -ಶಿಸ್ತು ಕ್ರಮ.

**ಓದಲಾಗಿದೆ.**

1. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ: ಜಅಇ/ಆಡಳಿತ-3/ ವಿನಿ6/09/2005-06, ದಿನಾಂಕ: 15-07-2006 ಮತ್ತು ದಿ-11-08-2006.
2. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 47 ಕೃಪವಿ 2006, ದಿನಾಂಕ: 16-09-2006.
3. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 47 ಕೃಪವಿ 2006, ದಿನಾಂಕ: 03-01-2007, 23-02-2007 ಮತ್ತು 26-03-2011.
4. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ: 26-03-2012.

*********

**ಪ್ರಸ್ತಾವನೆ:**

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಜಲಾನಯನ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆಂಬ ಆಪಾದನೆಗಳ ಮೇಲೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಪತ್ರಗಳಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ದೋಷರೋಪಣಾ ಪಟ್ಟಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. ಶ್ರೀ ಕೆ.ಬಿ.ರಾಮಸ್ವಾಮಿ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ)
2. ಶ್ರೀ ಎಂ.ಅಸ್ಲಂ, ಕೃಷಿ ಅಧಿಕಾರಿ.
3. ಶ್ರೀ ಕೆ.ಎಸ್.ಜಯಕುಮಾರ್, ಕೃಷಿ ಸಹಾಯಕ.
4. ಶ್ರೀ ಎಂ.ವಿ.ನಾಗರಾಜು, ಕೃಷಿ ಸಹಾಯಕ.
5. ಶ್ರೀ ಗೌಸ್ ಮೊಹೀದ್ದಿನ್, ಸಹಾಯಕ ಕೃಷಿ ಅಧಿಕಾರಿ.
6. ಶ್ರೀ ಆರ್.ರಘುನಾಥ, ಕೃಷಿ ಸಹಾಯಕ.
7. ಶ್ರೀ ಕೆ. ದಾಸೇಗೌಡ, ಕೃಷಿ ಸಹಾಯಕ.

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ:16-09-2006ರ ಸರ್ಕಾರದ ಕಾರಣ ಕೇಳುವ ಪತ್ರದೊಂದಿಗೆ ದೋಷರೋಪಣಾ ಪಟ್ಟಿಯನ್ನು ಸದರಿ ಅಧಿಕಾರಿ/ನೌಕರರುಗಳಿಗೆ ಜಾರಿ

28

ಮಾಡಿ ದೋಷರೋಪಣಾ ಪಟ್ಟಿಗೆ ಅವರುಗಳು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ಪ್ರಕರಣದಲ್ಲಿ ಸತ್ಯಾತ್ಯತೆಯನ್ನು ಕಂಡುಕೊಳ್ಳಲು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ:26–03–2011ರ ಸರ್ಕಾರದ ಆದೇಶದಲ್ಲಿ ಶ್ರೀ ಡಿ.ವಿ. ಶೇಠ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅಧೀಕ್ಷಕರು, ಆಯುಕ್ತರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ಅದರಂತೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಪ್ರಕರಣದ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಈ ಕೆಳಕಂಡ ಕಾರಣಗಳಿಂದ ವಿಚಾರಣೆಗೆ ಗುರಿಪಡಿಸಿದ ಯಾರೊಬ್ಬರ ಮೇಲಿನ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವರದಿಯನ್ನು ನೀಡಿರುತ್ತಾರೆ.

ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿ ಹೇಳಿಕೆಗಳನ್ನು ನೀಡಬೇಕಾದ ಶ್ರೀ ಎಸ್.ಕೆ. ಕೆಂಪರಾಜು, ಉಪ ಕೃಷಿ ನಿರ್ದೇಶಕರು, ಕೃಷಿ ನಿರ್ದೇಶನಾಲಯ, ಬೆಂಗಳೂರು, ಹಾಗೂ ಆರ್.ಕೃಷ್ಣಮೂರ್ತಿ, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಚಿತ್ರದುರ್ಗ, ಇವರುಗಳು ಆರೋಪಿತರ ಬಗ್ಗೆಯಾಗಲಿ ಅಥವಾ ಶಿಸ್ತು ಪ್ರಾಧಿಕಾರ ಆಪಾದಿಸಿರುವ ಆಪಾದನೆಗಳ ಬಗ್ಗೆಯಾಗಲಿ, ಯಾವುದೇ ಚಕಾರ ಶಬ್ದವನ್ನು ಎತ್ತದೇ ಇದ್ದ ಕಾರಣ ಅವರ ಸಾಕ್ಷಾದಾರಗಳು ಶಿಸ್ತು ಪ್ರಾಧಿಕಾರದ ಸಹಾಯಕ್ಕೆ ಬರಲಾಗದು ಎಂಬ ತೀರ್ಮಾನಕ್ಕೆ ಬಂದಿರುತ್ತೇನೆಂದು ವರದಿ ಮಾಡಿದ್ದಾರೆ ಹಾಗೂ ಪ್ರಕರಣದ ಮತ್ತೊಬ್ಬ ಸಾಕ್ಷಿದಾರರಾದ ಶ್ರೀ ಎ. ರಾಜಣ್ಣ ಅಪರ ಕೃಷಿ ನಿರ್ದೇಶಕರು, ಜಾಗೃತ ದಳ ಜಲಾನಯನ ಅಭಿವೃದ್ಧಿ ಇಲಾಖೆ, ಇವರು ಸದರಿ ಕಾಮಗಾರಿಗಳ ಬಗ್ಗೆ ತನಿಖೆಯನ್ನು ನಡೆಸಿ ನೀಡಿದ ವರದಿಯಲ್ಲಿ ಕಾಮಗಾರಿಗಳ ಬಗ್ಗೆ ಕಂಡುಬಂದ ನ್ಯೂನತೆಗಳನ್ನು ದಾಖಲಿಸಿರುವುದಾಗಿ ನುಡಿದಿದ್ದಾರೆ. ಅವರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ ಕಾಮಗಾರಿಗಳ ತನಿಖೆ ಕೈಗೊಳ್ಳುವ ಪೂರ್ವದಲ್ಲಿ ಯಾವ ಪದ್ಧತಿಯನ್ನು ಅನುಸರಿಸಬೇಕು ಅನ್ನುವುದರ ಬಗ್ಗೆ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ಗಮನಿಸಿಲ್ಲವೆಂದು ನುಡಿದಿರುತ್ತಾರೆ. ಸಂಬಂಧಿಸಿದ ಆಪಾದಿತರಿಗೆ ತನಿಖೆ ನಡೆಸುವ ಸಂದರ್ಭದಲ್ಲಿ ಮೌಖಿಕವಾಗಿ ಹಾಜರಿರಲು ತಿಳಿಸಿದುದಾಗಿ ನುಡಿದಿರುತ್ತಾರೆಂದು ಮತ್ತು ಕಾಮಗಾರಿ ಅನುಷ್ಠಾನದ ಬಗ್ಗೆ ಆಯುಕ್ತರ ಕಚೇರಿಯಿಂದ ನೀಡಿರುವ ಸಲಹೆ ಸೂಚನೆ ಮತ್ತು ಸಂಬಂಧಿಸಿದ ಸುತ್ತೋಲೆಯಂತೆ ಕಾಮಗಾರಿಗಳಿಗೆ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ತಾಂತ್ರಿಕ ಮಂಜೂರಾತಿಯನ್ನು ನೀಡಿ, ಅಳತೆ ಪುಸ್ತಕದಲ್ಲಿ ಸಹಿ ಮಾಡಿರುವ ದಿನಾಂಕವನ್ನು

ನಮೂದು ಮಾಡದೇ ಇರಬಹುದೆಂದು, ತಾವು ತಪಾಸಣೆ ಕೈಗೊಂಡಿದಿದ್ದುದಾಗಿ ಹೇಳಿರುತ್ತಾರೆ. ಕಾಮಗಾರಿಯ ತಡೆಅಣೆಗಳ ಮೇಲ್ಭಾಗ ಅಥವಾ ಕೆಳಭಾಗದ ಕಾಮಗಾರಿಗಳು ಆಗಿದ್ದವೋ ಇಲ್ಲವೋ ಎಂಬುದರ ಬಗ್ಗೆ ತಮಗೆ ಜ್ಞಾಪಕವಿಲ್ಲವೆಂದು ನುಡಿದು, ಸದರಿ ಕಾಮಗಾರಿಯ ಎತ್ತರ ಎಷ್ಟಿರಬೇಕೆಂಬುದಾಗಿ ನಮೂದಿಸಿದಿದ್ದುದಾಗಿ ತಿಳಿಸಿ ತಾವು ತಪಾಸಣೆಗೆ ಹೋದಾಗ ಸ್ವತ: ಕಂಡಿದ್ದನ್ನು ತಮ್ಮ ವರದಿಯಲ್ಲಿ ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಕಾಮಗಾರಿಗಳ ಪರಿಶೀಲನೆಯ ವೇಳೆಯಲ್ಲಿ ತಾವು ಇಲಾಖೆಯ ಅಧಿಕಾರಿಗಳ ಜೊತೆ ಇದ್ದು, ಸಹಾಯ ಮಾಡಿದವರ ಹೇಳಿಕೆಗಳನ್ನು ಬರೆದುಕೊಂಡಿಲ್ಲವೆಂದು ಹಾಗೂ ಪಂಚನಾಮೆಯನ್ನು ದಾಖಲಿಸಿಲ್ಲವೆಂದು ಹೇಳಿ, ಪ್ರಶ್ನಿತ ಕ್ಷೇತ್ರದ ಫಲಾನುಭವಿಗಳ ಹಾಗೂ ಜಲಾನಯನ ಸಂಘದ ಅಧ್ಯಕ್ಷರ ಮತ್ತು ಸದಸ್ಯರ ಹೇಳಿಕೆಗಳನ್ನು ಬರೆದುಕೊಂಡಿಲ್ಲವೆಂದು, ಸಹ ನುಡಿದಿರುತ್ತಾರೆ. ಎಲ್ಲಾ ಬದುಗಳ ಅಳತೆಯನ್ನು ಮಾಡಿರುವುದಿಲ್ಲವೆಂದು ಎಷ್ಟು ಕಡೆ ಬದುಗಳನ್ನು ನಿರ್ಮಿಸಿದ್ದಾರೆ ಎಂಬುದು ತಮಗೀಗ ನೆನಪಿಲ್ಲವೆಂದು ಹೇಳಿಕೆ ನೀಡಿ ಕಾಮಗಾರಿಗಳ ಹೊರ ಗೋಡೆಗಳ ತಪಾಸಣೆಗಳ ಬಗ್ಗೆ ಪಂಚನಾಮೆಯನ್ನು ತಯಾರಿಸಿಲ್ಲವೆಂದು ನುಡಿದಿರುತ್ತಾರೆ ಅಲ್ಲದೆ ಕಾಮಗಾರಿ ಗಳನ್ನು ಯಾವ ಅವಧಿಯಲ್ಲಿ ಅನುಷ್ಠಾನಗೊಳಿಸಲಾಯಿತು ಎಂಬುದರ ಬಗ್ಗೆ ತಮಗೆ ನೆನಪಿಲ್ಲವೆಂದು, ಕಾಮಗಾರಿ ಮುಗಿಸಿ ಅದನ್ನು ಫಲಾನುಭವಿಗಳಿಗೆ ಕೊಟ್ಟ ನಂತರ ಅದರ ನಿರ್ವಹಣೆ ಫಲಾನುಭವಿಗಳಿಗೆ ಸಂಬಂಧಿಸಿದೆ ಎನ್ನುವುದು ನಿಜವೆಂದು ಹೇಳಿ ಸದರಿ ಕಾಮಗಾರಿಯ ನಿರ್ಮಾಣದ ಕೆಲಸವನ್ನು ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ, ಇವರು ತಪಾಸಣೆ ಮಾಡಿರುತ್ತಾರೆಂದು ವಿಚಾರಣಾ ಪ್ರಾಧಿಕಾರದ ಮುಂದೆ ಹೇಳಿರುತ್ತಾರೆ.

ಆಪಾದಿತರ ಪರ ಸಾಕ್ಷಿದಾರರಾದ ಶ್ರೀ ರವಿಕುಮಾರ್, ಯಲ್ಲದಕೆರೆ ಗ್ರಾಮ ಮತ್ತು ಶ್ರೀ ಪರಮೇಶ್ವರಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ಇವರುಗಳು ತಮ್ಮ ಹೇಳಿಕೆಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿ ರುತ್ತದೆಯೆಂದು ಮತ್ತು ಕಾಮಗಾರಿ ಕೈಗೊಂಡ ಸ್ಥಳದಲ್ಲಿ ಹಳ್ಳ ಹರಿಯುತ್ತಾ ಇತ್ತೆಂದು ಮತ್ತು ಅಲ್ಲಿ ಆರ್.ಎಫ್.ಸಿ. ಕಟ್ಟಲಾಗಿದೆಯೆಂದು ಹೇಳಿಕೆಯನ್ನು ನೀಡಿರುತ್ತಾರೆ ಎಂಬುದಾಗಿ ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿ, ಪ್ರಕರಣದಲ್ಲಿ ಆಪಾದನೆಗೆ ಗುರಿಪಡಿಸಿದ, ಸದರಿ ಅಧಿಕಾರಿ/ನೌಕರರುಗಳ ಮೇಲಿನ ಆಪಾದನೆ ಗಳು ರುಜುವಾಗಿರುವುದಿಲ್ಲವೆಂದು ವರದಿಯನ್ನು ನೀಡಿರುತ್ತಾರೆ.

ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಆರೋಪಗಳನ್ನು ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಒಪ್ಪಿ ವಿಚಾರಣೆಗೊಳಪಡಿಸಿದ ಅಧಿಕಾರಿ/ನೌಕರರುಗಳನ್ನು ಆರೋಪಗಳಿಂದ ಮುಕ್ತರನ್ನಾಗಿ ಮಾಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 47 ಕೃಪವಿ 2006**
**ಬೆಂಗಳೂರು, ದಿನಾಂಕ: 07/11/2012.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ ಪ್ರಕರಣದಲ್ಲಿ ವಿಚಾರಣೆಗೆ ಗುರಿಪಡಿಸಲಾದ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದಿಲ್ಲವಾದ್ದರಿಂದ ಅವರುಗಳನ್ನು ಅವರ ಮೇಲಿನ ಆರೋಪಗಳಿಂದ ದೋಷಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

1) ಶ್ರೀ ಕೆ.ಬಿ.ರಾಮಸ್ವಾಮಿ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ)
2) ಶ್ರೀ ಎಂ.ಅಸ್ಲಂ, ಕೃಷಿ ಅಧಿಕಾರಿ.
3) ಶ್ರೀ ಕೆ.ಎಸ್.ಜಯಕುಮಾರ್, ಕೃಷಿ ಸಹಾಯಕ.
4) ಶ್ರೀ ಎಂ.ವಿ.ನಾಗರಾಜು, ಕೃಷಿ ಸಹಾಯಕ.
5) ಶ್ರೀ ಗೌಸ್ ಮೊಹೀದ್ದಿನ್, ಸಹಾಯಕ ಕೃಷಿ ಅಧಿಕಾರಿ.
6) ಶ್ರೀ ಆರ್.ರಘುನಾಥ, ಕೃಷಿ ಸಹಾಯಕ.
7) ಶ್ರೀ ಕೆ.ದಾಸೇಗೌಡ, ಕೃಷಿ ಸಹಾಯಕ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.

4. ಶ್ರೀ ಡಿ.ವಿ.ಶೇಟ್, ಆದರ್ಶ, ಸೈದಾಪುರ ಧಾರವಾಡ-580 008.
5. ಜಿಲ್ಲಾ ಜಲಾನಯನ ಅಭಿವೃದ್ದಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.
6. ಜಂಟಿ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಿತ್ರದುರ್ಗ.
7. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಕಾಸ ಸೌಧ, ಬೆಂಗಳೂರು.
8. ಸಂಬಂಧಪಟ್ಟ ಅಧಿಕಾರಿಯವರಿಗೆ. (ಜಲಾನಯನ ಅಭಿವೃದ್ದಿ ಇಲಾಖೆ ಆಯುಕ್ತರ ಮೂಲಕ).
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.